# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
## ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೇ, ಬೆಂಗಳೂರು–560 065

**ಪರಿಷ್ಕರಿಸಿದ ತಿದ್ದುಪಡಿಗಳೊಂದಿಗೆ ಕರೆಯಲಾದ ಮರು ಟೆಂಡರ್ ಅಧಿಸೂಚನೆ ಸಂಖ್ಯೆ:**
**NO.EO/MAIN CANTEEN/GKVK/2023-24, DATED: 26-02-2024**

ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸುಮಾರು 2000 ವಿದ್ಯಾರ್ಥಿಗಳು ಮತ್ತು ಸಿಬ್ಬಂಧಿಗಳಿಗೆ ಉಪಹಾರ / ಆಹಾರವನ್ನು (11 ತಿಂಗಳ ಅವಧಿಗೆ) ಪೂರೈಕೆ ಮಾಡಲು ಕಾರ್ಮಿಕ ಕಾಯ್ದೆಯಡಿಯಲ್ಲಿ ನೋಂದಾಯಿತ ನುರಿತ ಕ್ಯಾಟರರ್ಸ್ / ಹೋಟೆಲ್ ಉದ್ಯಮಿಗಳಿಂದ ದ್ವಿ–ಲಕೋಟೆಯಲ್ಲಿ ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಸಸ್ಯಹಾರಿ ಮುಖ್ಯ ಉಪಹಾರ ಮಂದಿರದ ಟೆಂಡರ್‌ದಾರರು ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡುಗಳನ್ನು ದ್ವಿ–ಲಕೋಟೆಯಲ್ಲಿ ದಿನಾಂಕ: 05–03–2024 ರ ಬೆಳಿಗ್ಗೆ 10.00 ಗಂಟೆ ಒಳಗೆ ಸೀಲ್ ಮಾಡಲಾದ ಲಕೋಟೆಯಲ್ಲಿ ಆಸ್ತಿ ಅಧಿಕಾರಿಗಳ ಕಛೇರಿಯಲ್ಲಿಟ್ಟಿರುವ ಪೆಟ್ಟಿಗೆಯಲ್ಲಿ ಹಾಕುವುದು. ತಾಂತ್ರಿಕ ಬಿಡ್ಡಿನಲ್ಲಿ 1) ಸಂಸ್ಥೆಯ ನೋಂದಾವಣೆ ಪ್ರಮಾಣ ಪತ್ರ. 2) ಅನುಭವದ ಪ್ರಮಾಣ ಪತ್ರ. 3) ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲಗಳ ವಿವರ. 4) ರೂ.2,00,000/– ಗಳಿಗೆ ಸಾಲ್ವೆನ್ಸಿ ಪ್ರಮಾಣ ಪತ್ರ. 5) ಹಾಲಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್‌ಗಳ ಛಾಯಚಿತ್ರಗಳು. 6) ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಪ್ರಮಾಣ ಪತ್ರ (FSSAI), 7) ಕಾರ್ಮಿಕರ ನೋಂದಾವಣೆ ಪ್ರಮಾಣ ಪತ್ರ ESI/PF ಮತ್ತು ESI ಹಾಗೂ PF ಪಾವತಿಸಿರುವ ಚಲನ್‌ಗಳ ಪ್ರತಿಗಳು, 8) ನೂತನವಾಗಿ ನವೀಕರಿಸಿರುವ ಪ್ರಮಾಣ ಪತ್ರ (Renewal Certificate), 9) ಕನಿಷ್ಠ 3 ವರ್ಷದ ಆದಾಯ ತೆರಿಗೆ ಪಾವತಿಸಿರುವ ದಾಖಲೆಗಳು, 10) ಜಿಎಸ್‌ಟಿ ಪ್ರಮಾಣ ಪತ್ರ. 11) ಭದ್ರತಾ ಠೇವಣಿಯಾಗಿ ರೂ.1,00,000/– ಗಳನ್ನು ಡಿಡಿ ಮುಖಾಂತರ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು–65 ಇವರ ಹೆಸರಿಗೆ ಸಲ್ಲಿಸುವುದು. ಖಾಲಿ ಟೆಂಡರ್ ಫಾರಂನ ಬೆಲೆ ರೂ.2,000/– ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ಪಡೆದುಕೊಳ್ಳುವ ಕೊನೆಯ ದಿನಾಂಕ: 04–03–2024 ರ ಅಪರಾಹ್ನ 3.00 ಗಂಟೆಗೆ, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಕೃಷಿ ವಿಶ್ವವಿದ್ಯಾನಿಲಯಕ್ಕೆ ಟೆಂಡರ್‌ನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವಿರುತ್ತದೆ. ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: 06–03–2024 ರ ಬೆಳಿಗ್ಗೆ 10.30 ಗಂಟೆಗೆ ತೆರೆಯಲಾಗುವುದು. ಉಪಹಾರ ಮಂದಿರದ ಮೇಲ್ವಿಚಾರಣಾ ಸಮಿತಿಯ ಸಭೆಯು ತಾಂತ್ರಿಕ ಬಿಡ್ಡುಗಳನ್ನು ಪರಿಶೀಲಿಸಿ, ತಾಂತ್ರಿಕ ಬಿಡ್ಡಿನಲ್ಲಿ ತೇರ್ಗಡೆ ಹೊಂದಿರುವ ಟೆಂಡರ್‌ದಾರರನ್ನು ಆಯ್ಕೆ ಮಾಡಲಾಗುತ್ತದೆ ನಂತರ ಹಣಕಾಸಿನ ಬಿಡ್ಡನ್ನು ದಿನಾಂಕ: 09–03–2024 ರ ಬೆಳಿಗ್ಗೆ 11.00ಕ್ಕೆ ತೆರೆಯಲಾಗುವುದು.

**ವಿಶೇಷ ಸೂಚನೆ:**

1) ಖಾದ್ಯಗಳ ದರಪಟ್ಟಿಯನ್ನು ಟೆಂಡರ್ ಫಾರಂನ ಜೊತೆ ನಮೂದಿಸಿ ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕಾಗುತ್ತದೆ.
2) 11 ತಿಂಗಳ ನಂತರ ಉಪಹಾರ ಮಂದಿರದ ಕಾಲಾವಧಿಯನ್ನು ವಿಸ್ತರಿಸುವ ಹಕ್ಕು ಉಪಹಾರ ಮಂದಿರ ಸಮಿತಿಗೆ ಇರುತ್ತದೆ.

ಆಸ್ತಿ ಅಧಿಕಾರಿಗಳು